ಮಂಗಳೂರು ತಾಲ್ಲೂಕಿನಲ್ಲಿ 3300 ಎಕರೆ ಪ್ರದೇಶದಲ್ಲಿ ಮಲ್ಟಿ ಪ್ರಾಡಕ್ಟ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಭಾರತ ಸರ್ಕಾರದ ತಾತ್ವಿಕ ಅನುಮೋದನೆ ದೊರಕಿರುತ್ತದೆ

ಇ) ಬಂಡವಾಳ ಹೂಡಿಕೆಗೆ ಈ ಕೆಳಕಂಡ ಸಂಸ್ಥೆಗಳು ಮುಂದೆ ಬಂದಿವೆ

ಅನುಮೋಧನೆ ಪಡೆದಿರುವ ಸಂಸ್ಥೆಗಳು

1) ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ

2) ಮೆ ಇನ್‌ಫೋಸಿಸ್

3) ಮೆ ಬಿ ಎ ಟೆಕ್ ಪಾರ್ಕ್ ಪ್ರೈ ಲಿ ಹಾಗೂ

4) ಮೆ ಮಂಗಳುರು ಎಸ್‌ಇಜೆಡ್ ಲಿಮಿಟೆಡ್

ಭಾರತ ಸರ್ಕಾರದಿಂದ ಅನುಮೋದನೆಗಾಗಿ ಬಾಕಿ ಇರುವ ಸಂಸ್ಥೆಗಳು

1) ಮೆ ಕಿನ್‌ಫೋಟೆಕ್ ಸಾಫ್ಟ್‌ವೇರ್ ಪ್ರೈ ಲಿಮಿಟೆಡ್,

2) ಮೆ ರೆನಸಾನ್ಸ್ ಡಿಸೈನ್ ಬಿಲ್ಡ್ ಪ್ರೈ ಲಿಮಿಟೆಡ್

ಈ) ರಾಜ್ಯ ಸರ್ಕಾರದ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಮೆ *ಇನ್‌ಫೋಸಿಸ್ ಹಾಗೂ ಮಂಗಳೂರು ಎಸ್‌ಇಜಡ್ ಲಿಮಿಟೆಡ್ ಇವರಿಗೆ ಭೂಸ್ವಾಧೀನ ಮಾಡಿಕೊಡುತ್ತದೆ ಹಾಗೂ ಭಾರತ ಸರ್ಕಾರದ ವಿಶೇಷ ಆರ್ಥಿಕ ವಲಯ ಕಾಯ್ದೆ 2005 ಹಾಗೂ ನಿಯಮಗಳು 2006ರನ್ವಯ ರಾಜ್ಯದ ತೆರಿಗೆಗಳ ವಿನಾಯಿತಿ ಹಾಗೂ ಸ್ಟಾಂಪ್ ಶುಲ್ಕ ಮನ್ನಾ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಕೇಂದ್ರ ಸರ್ಕಾರವು ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ನಿರ್ದಿಷ್ಟ / ತಾತ್ವಿಕ ಅನುಮೋದನೆಗಳನ್ನು ನೀಡುತ್ತದೆ ಹಾಗೂ ವಿಶೇಷ ಆರ್ಥಿಕ ವಲಯ ಕಾಯ್ದೆ 2005ರ ಪ್ರಕಾರ ಆದಾಯ ತೆರಿಗೆ ವಿನಾಯಿತಿ, ಕಸ್ಟಮ್ಸ್ ತೆರಿಗೆ ವಿನಾಯಿತಿ, ಎಕ್ಸೈಸ್ / ಸಿಎಸ್‌ಟಿ / ಸೇವಾ ತೆರಿಗೆ ವಿನಾಯಿತಿಗಳನ್ನು ನೀಡುತ್ತದೆ

ಅನುಬಂಧ – II

32 (84) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಆಶ್ರಯ ಮನೆ ಹಂಚಿಕೆ ಮಾಡಲು ಪ್ರಸಕ್ತ ಸಾಲಿನಲ್ಲಿ ಗುರಿ ನಿಗದಿಪಡಿಸಲಾಗಿದೆಯೇ , (ತಾಲ್ಲೂಕುವಾರು ವಿವರ ನೀಡುವುದು) ,

ಆ) ಈ ವರ್ಷದಲ್ಲಿ ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಪ್ರಸಕ್ತ ಸಲಿನಲ್ಲಿ ಗುರಿ ನಿಗದಿಪಡಿಸಿದೆ

ಈ ವರ್ಷದಲ್ಲಿ ಅಂದರೆ 2006–07ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಒಟ್ಟು 340560 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ ನಗರ ಆಶ್ರಯ ಯೋಜನೆಯಡಿಯಲ್ಲಿ ಯಾವುದೇ ಗುರಿಯನ್ನು ನಿಗದಿ ಪಡಿಸಿರುವುದಿಲ್ಲ

ಆ) ತಾಲ್ಲೂಕುವಾರು ವಿವರವನ್ನು ಅನುಬಂಧ 'ಅ' ದಲ್ಲಿ ನೀಡಲಾಗಿದೆ

33 (85) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ,

ಆ) ಇದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು ,

ಇ) 1994ನೇ ಜೂನ್ ನಂತರ ಆರಂಭಗೊಂಡ ಇಂಗ್ಲೀಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ, 1994ನೇ ಜೂನ್ ಪೂರ್ವದಲ್ಲಿ ಆರಂಭಗೊಂಡ ಶಾಲೆಗಳಿಗೆ ರಾಜ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯ ಅನ್ವಯ ವಿನಾಯ್ತಿ ನೀಡದಂತೆ ಈ ಶಾಲೆಗಳಲ್ಲಿ ವಿನಾಯ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಈ) ಇಲ್ಲವಾದಲ್ಲಿ, ಸುಮಾರು ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ ,

ಉ) ಹೌದಾದಲ್ಲಿ, ತಕ್ಷಣಕ್ಕೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ನೀಡುವಷ್ಟು ಶಾಲಾ ಕೊರಡಿಗಳು, ಶಿಕ್ಷಕರ ವ್ಯವಸ್ಥೆ ಇದೆಯೇ ,

ಊ) ಈ ನಿಟ್ಟಿನಲ್ಲಿ ಪರ್ಯಾಯವಾಗಿ ಪ್ರವೇಶ ಕಲ್ಪಿಸಲು ಉದ್ದೇಶಿಸಿರುವ ಶಾಲೆಗಳಾವುವು , (ವಿವರ ನೀಡುವುದು) ?